# ಕತೆಪುಸ್ತಕ ಆಧಾರಿತ ಕಾರ್ಯಹಾಳೆಗಳು (ವರ್ಕ್ ಶೀಟ್ ಗಳು)

# ಗುಂಡುತೋಪುಗಳೆತ್ತ ಹೋದವು?



ಕತೆಯನ್ನು ಇಲ್ಲಿ ಓದಬಹುದು:

http://publications.azimpremjifoundation.org/2771/2/GundaThope%20-%20English.pdf

**ಪರಿವಿಡಿ:**

ಸಹನಾ ಸುಬ್ರಮಣ್ಯನ್, ಹರಿಣಿ ನಾಗೇಂದ್ರ, ಸೀಮಾ ಮುಂಡೋಲಿ.

**ಚಿತ್ರಗಳು:**

ನೀಹಾರಿಕ ವರ್ಮಾ, ಸಹನಾ ಸುಬ್ರಮಣ್ಯನ್

**ವಿನ್ಯಾಸರಚನೆ:**

ಕ್ಷೀರಜ ಕೃಷ್ಣನ್

ಏಪ್ರಿಲ್ - 2021

**ಕಾರ್ಯಹಾಳೆ 1:**

**ಜನಸಮುದಾಯ ಮುಕ್ತವಾಗಿ ಬಳಸಬಹುದಾದಂತಹ ಸಂಪನ್ಮೂಲಗಳು ಯಾವುವು?**

ಕತೆಪುಸ್ತಕ ಆಧಾರಿತವಾದ "ಗುಂಡುತೋಪುಗಳೆತ್ತ ಹೋದವು?"

**ಉದ್ದೇಶಗಳು:**

- ಜನಸಮುದಾಯ ಮುಕ್ತವಾಗಿ ಬಳಸಬಹುದಾದಂತಹ ಸಂಪನ್ಮೂಲಗಳ ಕುರಿತು ತಿಳಿಯುವುದು
- ಜನಸಮುದಾಯ ಮುಕ್ತವಾಗಿ ಬಳಸಬಹುದಾದಂತಹ ಸಂಪನ್ಮೂಲಗಳ ವಿವಿಧ ಉಪಯೋಗಗಳ ಬಗ್ಗೆ ಅರ್ಥ ಮಾಡಿಕೊಳ್ಳುವುದು
- ಜನಸಮುದಾಯ ಮುಕ್ತವಾಗಿ ಬಳಸಬಹುದಾದಂತಹ ಸಂಪನ್ಮೂಲಗಳು ಏನಾಗುತ್ತಿದೆ ಎಂಬುದನ್ನು ತಿಳಿಯುವುದು

ಜನಸಮುದಾಯ ಮುಕ್ತವಾಗಿ ಬಳಸಬಹುದಾದಂತಹ ಅಥವಾ ಸಾಮಾನ್ಯವಾಗಿ ಹಂಚಿಕೊಳ್ಳುವಂತಹ ಸಂಪನ್ಮೂಲಗಳು ಯಾವುವು?

ಜನರು ಮುಕ್ತವಾಗಿ ಬಳಸುವಂತಹ ಸಂಪನ್ಮೂಲಗಳು ಅಂದರೆ ಸಮುದಾಯವು ಬಳಸುವಂತಹ ಮತ್ತು ಒಟ್ಟಿಗೆ ನಿರ್ವಹಿಸುವ ಸಂಪನ್ಮೂಲಗಳಾಗಿವೆ. ಕಾಡುಗಳು, ನದಿಗಳು, ಕೊಳಗಳು, ಗುಂಡುತೋಪುಗಳು (ಮರಗಳ ತೋಪು), ಗೋಮಾಳ (ಮೇಯಿಸುವ ಭೂಮಿ/ಮೈದಾನ), ಮತ್ತು ಕೆರೆಗಳು ಇತ್ಯಾದಿಗಳೆಲ್ಲವೂ ಹಳ್ಳಿಗಳಲ್ಲಿ ಸರ್ವಸಾಮಾನ್ಯವಾಗಿ ಕಂಡುಬರುತ್ತದೆ. ತಿನ್ನಲು ಆಹಾರ, ಕುಡಿಯಲು ನೀರು, ಖಾಯಿಲೆಯನ್ನು ಗುಣಪಡಿಸುವಂತಹ ಔಷಧಿ, ಉರುವಲು ಮತ್ತು ಮರದ ಮುಟ್ಟುಗಳು ಮುಂತಾದವುಗಳೆಲ್ಲವು ಪ್ರಾಕೃತಿಕ ಸಂಪನ್ಮೂಲಗಳಾಗಿದ್ದು, ಸಮುದಾಯಗಳು ಇವೆಲ್ಲವುಗಳ ಉಪಯೋಗಗಳನ್ನು ಪಡೆಯುತ್ತವೆ. ಜೊತೆಗೆ ಇವುಗಳಿಂದ ಪಡೆದ ಅನೇಕ ಕಚ್ಚಾ ವಸ್ತುಗಳನ್ನು ಮನೆಗೆ ಮತ್ತು ಇತರ ಜನರಿಗೆ ಮಾರಾಟ ಮಾಡಲು ಸಹಾ ಬಳಸುತ್ತಾರೆ. ಈ ಸಂಪನ್ಮೂಲಗಳನ್ನು ಹೇಗೆ ಬಳಸಬೇಕು ಎಂಬುದರ ಬಗ್ಗೆ ಕೆಲವು ನಿಯಮಗಳನ್ನು ಹಾಕಿಕೊಳ್ಳುವ ಮೂಲಕ ಸ್ಥಳೀಯ ಸಮುದಾಯಗಳು ಈ ಪ್ರಾಕೃತಿಕ ಸಂಪನ್ಮೂಲಗಳನ್ನು ಕಾಪಾಡಿಕೊಳ್ಳುತ್ತವೆ. ಕೆರೆಗಳು ಮತ್ತು ಉದ್ಯಾನವನಗಳನ್ನು ನಗರಗಳಲ್ಲಿ ಜನರು ಮುಕ್ತವಾಗಿ ಬಳಸುವ ಸಂಪನ್ಮೂಲದ ಒಂದು ನಿದರ್ಶನಗಳಾಗಿವೆ ಎಂದರೆ ತಪ್ಪಾಗಲಾರದು.

**ಗುಂಡುತೋಪು ಎಂಬುದು ಕೂಡ ಜನಸಮುದಾಯ ಮುಕ್ತವಾಗಿ ಬಳಸುವಂತಹ ಒಂದು ಸಂಪನ್ಮೂಲವಾಗಿದೆ ಏಕೆಂದರೆ................**

ಗಿಡನೆಡಲು, ಕೊಯ್ಲು/ಕಟಾವು ಮಾಡಲು ಮತ್ತು ತೋಪುಗಳನ್ನು ನೋಡಿಕೊಳ್ಳಲು ಅಲ್ಲಿನ ಸ್ಥಳೀಯ ಸಮುದಾಯವು ತೊಡಗಿರುವುದರಿಂದ ಗುಂಡುತೋಪು ಎಂಬುದು ಜನರು ಮುಕ್ತವಾಗಿ ಬಳಸುವ ಒಂದು ಸಂಪನ್ಮೂಲವಾಗಿದೆ. ಈ

ತೋಪುಗಳ ನೆಲದಲ್ಲಿ ಹಳ್ಳಿಯ ಜನರು ಸಾಕಷ್ಟು ಮಾವಿನ ಮರಗಳು, ನೇರಳೆ ಮರಗಳು, ಹುಣಸೆ ಮರಗಳು, ಹಲಸಿನ ಮರಗಳು, ಆಲದ ಮರಗಳು, ಅತ್ತಿ ಮತ್ತು ಅರಳೀ ಮರಗಳನ್ನು ನೆಟ್ಟಿದ್ದಾರೆ. ಈ ಮರಗಳಿಂದ ಬರುವಂತಹ ಸಾಕಷ್ಟು ಹಣ್ಣುಕಾಯಿಗಳನ್ನು, ಖಾಯಿಲೆ ಗುಣಪಡಿಸುವಂತಹ ಔಷಧಿಗಳನ್ನು, ಉರುವಲು ಮತ್ತು ಕಟ್ಟಿಗೆಗಳನ್ನು ಅಲ್ಲಿನ ಜನಸಮುದಾಯವು ಬಳಸುವುದುಂಟು. ಹಸು, ಕರುಗಳಂತಹ ಜಾನುವಾರುಗಳಿಗೆ ಅವಶ್ಯಕವಾಗಿರುವ ಮೇವನ್ನು ಮೇಯಿಸಲು ಮತ್ತು ಸಂಗ್ರಹಿಸಲು ಸಹ ಈ ತೋಪನ್ನು ಬಳಸುತ್ತಾರೆ. ಇಲ್ಲಿ ಸಿಗುವಂತಹ ರುಚಿಕರವಾದ ಹಣ್ಣುಗಳನ್ನು ತಿನ್ನಲು ಮತ್ತು ಮರಗಳ ಸುತ್ತಲೂ ಆಟವಾಡಲು ಆ ಹಳ್ಳಿಯ ಮಕ್ಕಳು ಬರುತ್ತಾರೆ. ಇವೆಲ್ಲವುದರ ಜೊತೆಗೆ ಹಳ್ಳಿಗಳಲ್ಲಿ ನಡೆಯುವ ಗ್ರಾಮೀಣ ಸಭೆಗಳು, ಸಮುದಾಯದ ಹಬ್ಬಗಳನ್ನು ನಿಯೋಜಿಸಲು ಮತ್ತು ಹಬ್ಬಗಳನ್ನು ಆಚರಿಸಲು ಈ ತೋಪನ್ನು ಒಂದು ಸಮುದಾಯದ ಸ್ಥಳವಾಗಿಯೂ ಸಹ ಬಳಸಿಕೊಳ್ಳುತ್ತಾರೆ. ಈ ತೋಪುಗಳಲ್ಲಿ ಸಣ್ಣಪುಟ್ಟ ದೇವಸ್ಥಾನಗಳು ಹಾಗೂ ನಾಗರಕಲ್ಲುಗಳು ಇವೆ ಮತ್ತು ಹಳ್ಳಿಯ ಜನರು ಇವುಗಳಿಗೆ ಮತ್ತು ಅಲ್ಲಿನ ಮರಗಳಿಗೆ ಪೂಜೆಗಳನ್ನು ಸಹಾ ಸಲ್ಲಿಸುತ್ತಿರುತ್ತಾರೆ. ಈ ಹಿಂದೆಯೂ ಸಹಾ, ಪಂಚಾಯತ್ ಮತ್ತು ಹಳ್ಳಿಯ ಜನರು ಕೇವಲ ಮರಗಳನ್ನು ನೆಡುವುದಷ್ಟೇ ಅಲ್ಲ, ಅದರ ಜೊತೆಗೆ ಇಂತಹ ತೋಪುಗಳನ್ನು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವ ಕರ್ತವ್ಯವನ್ನು ಕೂಡ ನಿಭಾಯಿಸುತ್ತಿದ್ದರು. ಉದಾಹರಣೆಗೆ ಒಂದು ವೇಳೆ ಯಾರಾದರೂ ಅನುಮತಿಯಿಲ್ಲದೆ ಅಲ್ಲಿನ ಮರವನ್ನು ಕಡಿದರೆ ಅಂತಹವರು ಕಠಿಣ ಶಿಕ್ಷೆಗೆ ಒಳಪಡಬೇಕಾಗುತ್ತಿತ್ತು. ಅದೇ ಸಮಯದಲ್ಲಿ ಮರಗಳನ್ನು ಕಡಿಯಲು ಅನುಮತಿ ಇಲ್ಲದವರು ಸಹ ಸ್ವಂತ ಉಪಯೋಗಕ್ಕಾಗಿ ಮರಗಳ ಕೊಂಬೆಗಳನ್ನು ಕತ್ತರಿಸಲು ಮುಂದಾಗುತ್ತಿದ್ದರು.




**ಮಾಡುವ ಕಾರ್ಯಚಟುವಟಿಕೆಗಳು**

**ಚಟುವಟಿಕೆ 1: ಹಳ್ಳಿ/ನೆರೆಹೊರೆ ಮತ್ತು ಅಲ್ಲಿನ ಜನಸಮುದಾಯ ಮುಕ್ತವಾಗಿ ಬಳಸುವಂತಹ ಸಂಪನ್ಮೂಲಗಳನ್ನು ನಕ್ಷೆ ಮಾಡುವುದು**

ವಿದ್ಯಾರ್ಥಿಗಳು ತಮ್ಮ ಶಿಕ್ಷಕರೊಂದಿಗೆ ಹಳ್ಳಿ/ನೆರೆಹೊರೆಯ ಸುತ್ತಲೂ ಓಡಾಡಿ ಇವುಗಳನ್ನು ಗುರುತಿಸುವುದು:

1. ಹಳ್ಳಿ/ನೆರೆಹೊರೆಯ ಗಡಿ
2. ಹಳ್ಳಿ/ನೆರೆಹೊರೆಯ ಗಡಿಯೊಳಗೆ ಕಂಡುಬರುವ ವಿಭಿನ್ನವಾದ ಸ್ಥಳಗಳು (ನದಿಗಳು, ಕೆರೆಗಳು, ಬಾವಿಗಳು, ಉದ್ಯಾನವನಗಳು, ಕಟ್ಟೆಗಳು (ಮರಗಳು ಮತ್ತು ದೇವಸ್ಥಾನಗಳಲ್ಲಿ ಕಂಡುಬರುವಂತಹ ಕಟ್ಟೆಗಳು) ತೋಪುಗಳು, ಗೋಮಾಳ ಮತ್ತು ಜನರು ಮುಕ್ತವಾಗಿ ಬಳಸುವಂತಹ ಇತರೆ ಯಾವುದೇ ಸ್ಥಳಗಳು)
3. ಹಳ್ಳಿ/ನೆರೆಹೊರೆಯ ಪ್ರದೇಶದಲ್ಲಿ ಕಂಡುಬರುವ ಬಹುಮುಖ್ಯವಾದಂತಹ ಪ್ರಾಕೃತಿಕವಾಗಿ ಕಂಡುಬರುವ ಮತ್ತು ಮಾನವನಿಂದ ನಿರ್ಮಿಸಲ್ಪಟ್ಟಂತಹ ವೈಶಿಷ್ಟತೆಗಳು ಉದಾಹರಣೆಗೆ: ಗುಡ್ಡಗಾಡುಗಳು/ಬೆಟ್ಟಗಳು, ತೊರೆಗಳು, ಎರಡೂ ಬದಿಗಳಲ್ಲಿ ಮರಗಳನ್ನು ಹೊಂದಿರುವ ರಸ್ತೆಗಳು, ಬಸ್ ನಿಲ್ದಾಣಗಳು, ಶಾಲೆಗಳು, ಸರ್ಕಾರಿ ಕಚೇರಿಗಳು ಅಂದರೆ ವಾರ್ಡ್/ಪಂಚಾಯತ್ ಕಚೇರಿ, ಸಾರ್ವಜನಿಕ ಆರೋಗ್ಯ ಕೇಂದ್ರಗಳು, ಪಶುವೈದ್ಯಕೀಯ ಕೇಂದ್ರ, ದೊಡ್ಡ ಮನೆಗಳು, ಮತ್ತು ಮುಖ್ಯವಾದ ರಸ್ತೆಗಳು ಇತ್ಯಾದಿಗಳು.

ವಿದ್ಯಾರ್ಥಿಗಳನ್ನು ಚಿಕ್ಕ ಚಿಕ್ಕ ಗುಂಪುಗಳಾಗಿ ವಿಂಗಡಿಸುವುದು ಮತ್ತು ಅವರು ಹಳ್ಳಿ/ನೆರೆಹೊರೆಯ ಸುತ್ತಲೂ ಓಡಾಡಿ ಮೇಲ್ಕಂಡ 1, 2 ಮತ್ತು 3 ಅಂಶಗಳ ಮಾಹಿತಿಗಳನ್ನು ಆಧರಿಸಿ ತಾವು ಗರುತಿಸಿರುವ ವೈಶಿಷ್ಟ್ಯತೆಗಳೊಂದಿಗೆ ಹಳ್ಳಿ/ನೆರೆಹೊರೆಯ ನಕ್ಷೆಯನ್ನು ಬಿಡಿಸುವುದು.



**ಚಟುವಟಿಕೆ 2: ಜನಸಮುದಾಯ ಮುಕ್ತವಾಗಿ ಬಳಸುವಂತಹ ಸಂಪನ್ಮೂಲಗಳ ವಿಭಿನ್ನ ಉಪಯೋಗಗಳು ಮತ್ತು ಅವುಗಳನ್ನು ಉಪಯೋಗಿಸುವ ಜನರನ್ನು ಗುರುತಿಸಿ**

ನಿಮ್ಮ ಹಳ್ಳಿಯಲ್ಲಿ ಕಂಡುಬರುವ ಸಂಪನ್ಮೂಲಗಳನ್ನು ಗುರುತಿಸಿ, ಅಂದರೆ ಗುಂಡುತೋಪು, ಕೆರೆ, ಕೊಳ ಅಥವಾ ಗೋಮಾಳ ಸಹ ಆಗಿರಬಹುದು. ಒಂದು ವೇಳೆ ನೀವು ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದರೆ, ಜನರು ಮುಕ್ತವಾಗಿ ಬಳಸುವ ಅಲ್ಲಿನ ಉದ್ಯಾನವನ ಅಥವಾ ಕೆರೆಗಳಂತಹ ಸಂಪನ್ಮೂಲಗಳನ್ನು ಗುರುತಿಸುವುದು.

ಇಂತಹ ಜನಸಮುದಾಯ ಬಳಕೆಯ ಸಂಪನ್ಮೂಲಗಳನ್ನು ಬೆಳಗ್ಗೆ ಒಂದೆರೆಡು ಗಂಟೆ (ಬೆಳಗ್ಗೆ 7 ರಿಂದ 11 ಗಂಟೆಗಳವರೆಗೆ) ಮತ್ತು ಸಂಜೆ (ಮದ್ಯಾಹ್ನ 3 ರಿಂದ ಸಂಜೆ 7 ಗಂಟೆಗಳವರೆಗೆ) ವೀಕ್ಷಿಸಿ. ನೀವು ಗಮನಿಸಿದಂತಹ ಮಾಹಿತಿಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿ.

ಸಾಮಾನ್ಯವಾಗಿ ಬಳಸುವಂತಹ ಸಂಪನ್ಮೂಲಗಳ ವಿಧಗಳು

ಈ ಸಂಪನ್ಮೂಲಗಳಿಗೆ ಯಾವುದೇ ನಿರ್ದಿಷ್ಟ ಹೆಸರನ್ನು ನೀಡಲಾಗಿದೆಯೇ

| ಕ್ರ.ಸಂ | ಪ್ರಶ್ನೆ | ಬೆಳಗ್ಗೆ | ಸಂಜೆ |
|---|---|---|---|
| 1 | ಜನಸಮುದಾಯ ಮುಕ್ತವಾಗಿ ಬಳಸುವ ಸಂಪನ್ಮೂಲಗಳಿಗೆ ಯಾರು ಭೇಟಿ ನೀಡಿದರು | ಉದಾ: ಮೀನುಗಾರರು, ಗ್ರಾಮೀಣ ಮಹಿಳೆಯರು, ಹುಲ್ಲು ಮೇಯಿಸುವವರು | |
| 2 | ಅಲ್ಲಿಗೆ ಭೇಟಿ ನೀಡಿದ ವ್ಯಕ್ತಿಗಳು ಮಾಡಿದಂತಹ ಚಟುವಟಿಕೆಗಳು ಯಾವುವು?<br>ಮತ್ತು ಆ ಚಟುವಟಿಕೆಗಳನ್ನು ಎಲ್ಲಿ ಮಾಡಲಾಯಿತು? | ಉದಾ: ಮೀನುಗಾರರು - ಮೀನುಗಾರಿಕೆ,<br>ಮಹಿಳೆಯರು- ಬಟ್ಟೆ ಒಗೆಯುವುದು,<br>ಹುಲ್ಲು ಮೇಯಿಸುವವರು - ಹಸುಗಳನ್ನು ಮೇಯಿಸುವುದು ಮತ್ತು ತೊಳೆಯುವುದು | |
| 3 | ಅಲ್ಲಿನ ಸಂಪನ್ಮೂಲಗಳಿಂದ ಏನು ಸಂಗ್ರಹಿಸಿದರು ಮತ್ತು ಎಲ್ಲಿಂದ ಸಂಗ್ರಹಿಸಿದರು? | ಉದಾ: ಕೆರೆಗಳಿಂದ ಮೀನು,<br>ದನಕರುಗಳ ಮೇವಿನ ಹುಲ್ಲು,<br>ಕೆರೆಗಳಿಂದ ನೀರು. | |

**ಚಟುವಟಿಕೆ 3: ಜನಸಮುದಾಯ ಮುಕ್ತವಾಗಿ ಬಳಸಬಹುದಾದ ಸಂಪನ್ಮೂಲಗಳ ಬದಲಾವಣೆ ಮತ್ತು ಕಾಲಮಿತಿಯನ್ನು ರಚಿಸುವುದು**

ನಿಮ್ಮ ಹಳ್ಳಿಯಲ್ಲಿರುವ ಹಿರಿಯರೊಂದಿಗೆ ಮಾತನಾಡಿ. ಒಂದುವೇಳೆ ನೀವು ದೊಡ್ಡ ನಗರಪ್ರದೇಶದಲ್ಲಿ ವಾಸವಾಗಿದ್ದರೆ, ನಿಮ್ಮ ನಗರ ಪ್ರದೇಶದಲ್ಲಿ ತುಂಬಾದಿನಗಳಿಂದ ವಾಸಮಾಡುತ್ತಿರುವ ವ್ಯಕ್ತಿಯನ್ನು ಹುಡುಕಿ ಮಾತನಾಡಿ. ಅವರೊಂದಿಗೆ ಈ ಕೆಳಕಂಡ ಪ್ರಶ್ನೆಗಳನ್ನು ಕೇಳಿ, ಅವರಿಂದ ಬಂದಂತಹ ಉತ್ತರಗಳನ್ನು ಬರೆಯಿರಿ. ಒಂದುವೇಳೆ ಅವರು ಸಮ್ಮತಿಸಿದರೆ, ಅವರು ಮಾತನಾಡುವ ವೀಡಿಯೊವನ್ನು ನೀವು ನಿಮ್ಮ ಮೊಬೈಲ್ ಅಥವಾ ಕ್ಯಾಮೆರಾದಲ್ಲಿಯೂ ಸಹ ಧ್ವನಿಮುದ್ರಣ/ಚಿತ್ರೀಕರಿಸಬಹುದು.

ಚಟುವಟಿಕೆ 1ರಲ್ಲಿನ ಸಂಪನ್ಮೂಲಗಳಿಗಾಗಿ ಈ ಕೆಳಗಿನ ಮಾಹಿತಿಯನ್ನು ಸಂಗ್ರಹಿಸಿ:

1. ಜನಸಮುದಾಯ ಮುಕ್ತವಾಗಿ ಬಳಸುವ ಸಂಪನ್ಮೂಲ/ಸ್ಥಳಗಳಿಗೆ ಹೆಸರಿದ್ದರೆ, ಅದನ್ನು ಏಕೆ ಆ ಹೆಸರಿನಿಂದ ಕರೆಯಲಾಗಿದೆ?
2. ಹಿಂದಿನ ದಿನಗಳಲ್ಲಿ ಯಾವ ಸಂಪನ್ಮೂಲವನ್ನು ಜನರು ಮುಕ್ತವಾಗಿ ಬಳಸುತ್ತಿದ್ದರು?
3. ಒಂದುವೇಳೆ ಇದನ್ನು ಬಳಸದಿದ್ದರೆ ಅಥವಾ ಬಳಕೆಯಲ್ಲಿ ಬದಲಾವಣೆಯಾಗಿದ್ದರೆ ಅದು ಏಕೆ ಉಂಟಾಯಿತು?
4. ಹಿಂದಿನ ದಿನಗಳಲ್ಲಿ ಇಂತಹ ಸಂಪನ್ಮೂಲಗಳನ್ನು ಹೇಗೆ ನಿರ್ವಹಿಸಲಾಗುತ್ತಿತ್ತು?
5. ಇಂದಿನ ದಿನಗಳಲ್ಲಿ ಅವುಗಳನ್ನು ಹೇಗೆ ನಿರ್ವಹಿಸಲಾಗುತ್ತಿದೆ?

ಕೇಳಬಹುದಾದಂತಹ ಇನ್ನಿತರೇ ಪ್ರಶ್ನೆಗಳು.

ಹಳ್ಳಿ/ನೆರೆಹೊರೆಯಲ್ಲಿರುವ ಜನಸಮುದಾಯವು ಮುಕ್ತವಾಗಿ ಬಳಸುವ ವಿವಿಧ ರೀತಿಯ ಇತರೆ ಸಂಪನ್ಮೂಲಗಳು ಯಾವುವು?

ಈಗಲೂ ಇವುಗಳು ಅಸ್ತಿತ್ವದಲ್ಲಿವೆಯೇ?

ಒಂದುವೇಳೆ ಅವು ಅಸ್ತಿತ್ವದಲ್ಲಿಲ್ಲವಾದಲ್ಲಿ

1. ಅವುಗಳಿಗೆ ಏನಾಯಿತು?
2. ಅವು ಹೇಗೆ ಬದಲಾಯಿತು?
3. ಅವುಗಳು ಮುಂದಿನ ದಿನಗಳಲ್ಲಿ ಅಸ್ತಿತ್ವದಲ್ಲಿಲ್ಲದಿದ್ದರೆ ಜನರು ಏನು ಮಾಡಬಹದು? (ಉದಾಹರಣೆಗೆ, ಸಾಮಾನ್ಯ ಬಾವಿಯು ಇನ್ನು ಮುಂದೆ ಅಸ್ತಿತ್ವದಲ್ಲಿ ಇಲ್ಲದಿದ್ದರೆ, ಅವರು ಈಗ ನೀರನ್ನು ಎಲ್ಲಿಂದ ಪಡೆಯುತ್ತಾರೆ?)
4. ಅವುಗಳು ಇನ್ನು ಮುಂದೆ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದು ಅವರು ಏಕೆ ಯೋಚಿಸುತ್ತಾರೆ?

ಮೇಲಿನ ಸಂದರ್ಶನದ ತರುವಾಯ, ನಿಮ್ಮ ಬಳಿ ಇರುವ ಮಾಹಿತಿಯ ಪ್ರಕಾರ ಜನಸಮುದಾಯ ಮುಕ್ತವಾಗಿ ಬಳಸುವ ಸಂಪನ್ಮೂಲಗಳ ಅಂದಾಜು ಕಾಲಮಿತಿಯನ್ನು ಮಾಡಿ. ಇದು ಅವುಗಳ ಐತಿಹಾಸಿಕ ಕತೆಯನ್ನು ಮತ್ತು ಕಾಲಾಂತರದಲ್ಲಿ ಅದು ಹೇಗೆ ಬದಲಾಗಿದೆ ಎಂಬುದನ್ನು ಕಲಿಯಲು ಸಹಾಯ ಮಾಡುತ್ತದೆ. ಇದರ ಮೂಲಕ ಇಂತಹ

ಸಂಪನ್ಮೂಲಗಳೊಂದಿಗಿನ ಜನರ ಸಂಬಂಧಗಳು ಹೇಗೆ ಬದಲಾವಣೆ ಹೊಂದಿವೆ ಎಂಬುದರ ಬಗ್ಗೆಯೂ ಸಹ ನೀವು ಕಲಿಯಬಹುದು.

ಉದಾಹರಣೆ: ಗುಂಡುತೋಪಿನ ಕಾಲಮಿತಿ

ಗುಂಡುತೋಪಿನ ಕಾಲಮಿತಿ

1950- ಹಳ್ಳಿಯ ಮಧ್ಯಭಾಗದಿಂದ ಸುಮಾರು 2 ಕಿ.ಮೀ. ದೂರದ ಹೊರವಲಯದಲ್ಲಿ ದೊಡ್ಡ ಗುಂಡುತೋಪುಗಳಿದ್ದವು. ವಿವಿಧ ರೀತಿಯ ಅಗತ್ಯಗಳಿಗಾಗಿ ಹಳ್ಳಿ ಜನರು ಈ ತೋಪುಗಳನ್ನು ಬಳಸುತ್ತಿದ್ದರು. ಈ ತೋಪುಗಳನ್ನು ರಕ್ಷಿಸಲು ಜನರ ಒಂದು ಗುಂಪು ಇದ್ದು, ಇವುಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ಈ ಗುಂಪಿನಲ್ಲಿರುವ ಸದಸ್ಯರಿಗೆ ನೀಡಲಾಯಿತು. ಅಲ್ಲಿ ಮುಖ್ಯವಾಗಿ ಹುಣಸೆ, ಬೇವು, ಮತ್ತು ಮಾವಿನ ಮರಗಳು ಹೆಚ್ಚಾಗಿ ಬೆಳೆದಿದ್ದವು.

↓

1990 - ಹಳ್ಳಿಗಳಿಗೆ ಹತ್ತಿರದಲ್ಲಿದ್ದ ನಗರಗಳು ಬೆಳೆಯಲು ಶುರುವಾದವು, ಇದರಿಂದಾಗಿ ಹೆಚ್ಚಿನ ಜನರು ಕೆಲಸವನ್ನು ಹರಸುತ್ತಾ ಹಳ್ಳಿಯಿಂದ ನಗರಗಳಿಗೆ ಹೋಗಲು ಪ್ರಾರಂಭಿಸಿದರು.

↓

2000ರ ದಶಕದ ಆರಂಭದಲ್ಲಿ - ಹಳ್ಳಿಯ ಮಕ್ಕಳಿಗಾಗಿ ಪ್ರಾಥಮಿಕ ಶಾಲೆಯನ್ನು ನಿರ್ಮಿಸಲಾಗಿತ್ತು.

↓

2010 - ಹ್ಳ್ಳಿಯಲ್ಲಿ ಪ್ರೌಢಶಾಲೆಯನ್ನು ನಿರ್ಮಿಸಲು ನಿರ್ಧರಿಸಲಾಯಿತು. ಈ ಶಾಲೆಯ ಕಟ್ಟಡವನ್ನು ಹಳ್ಳಿಯ ಹೊರವಲಯದಲ್ಲಿರುವ ಗುಂಡುತೋಪುಗಳು ಇರುವ ಜಾಗದಲ್ಲಿ ಕಟ್ಟಲು ಪ್ರಾರಂಭಿಸಿದರು.

↓

2015 - ಉಳಿದ ಮರಗಳನ್ನು ಕಡಿದು ಅಲ್ಲಿ ಮಕ್ಕಳಿಗಾಗಿ ಉದ್ಯಾನವನವನ್ನು ನಿರ್ಮಿಸಲಾಯಿತು. ಈ ಉದ್ಯಾನವನದ ಸುತ್ತಲೂ ಮುಳ್ಳುತಂತಿಯ ಬೇಲಿಗಳನ್ನು ಹಾಕಲಾಗಿದ್ದು, ಯಾವುದೇ ದನಕರುಗಳು ಬಂದು ಮೇಯಲು ಅವಕಾಶವಿರಲಿಲ್ಲ. ಹಳ್ಳಿಜನರು ಈ ಮರಗಳನ್ನು ಯಾವುದೇ ಕಾರಣಕ್ಕು ಯಾವುದೇ ಉದ್ದೇಶಗಳಿಗಾಗಿಯೂ ಉಪಯೋಗಿಸುವಂತಿರಲಿಲ್ಲ. ತೋಪುಗಳನ್ನು ತೆರವುಗೊಳಿಸಲಾದ ಸಮಯದಿಂದಲೂ ಈ ಉದ್ಯಾನವನದಲ್ಲಿ ಒಂದು ಅರಳೀಮರದೊಂದಿಗೆ ಒಂದು ಕಟ್ಟೆ ಇತ್ತು.

↓

2020 - ಹಳ್ಳಿಯ ಸಮೀಪದಲ್ಲಿ ಹಲವಾರು ಬಡಾವಣೆಗಳು, ಪ್ರತ್ಯೇಕ ಮನೆಗಳು ಮತ್ತು ದೊಡ್ಡ ಮಟ್ಟದ ಅಂಗಡಿಗಳು ತಲೆ ಎತ್ತಿದವು. ಆ ಪ್ರದೇಶಗಳು ಹೆಚ್ಚು ನಗರೀಕರಣಗೊಳ್ಳುತ್ತಿದ್ದವು. ಹಳ್ಳಿಯಲ್ಲಿ ವಾಸಿಸುವ ಹಲವಾರು ಹದಿಹರೆಯದ ಮಕ್ಕಳಿಗೆ ಈ ಪ್ರದೇಶಲ್ಲಿ ಗುಂಡುತೋಪುಗಳು ಇದ್ದವು ಎಂಬುದರ ಬಗ್ಗೆ ಅರಿವೇ ಇರಲಿಲ್ಲ ಮತ್ತು ಅವರು ಅದನ್ನು ಎಂದಿಗೂ ನೋಡಿಯೂ ಇರಲಿಲ್ಲ.

**ಕಾರ್ಯಹಾಳೆ 2:**

**ಜನಸಮುದಾಯ ಮುಕ್ತವಾಗಿ ಬಳಸಬಹುದಾದ ಸಂಪನ್ಮೂಲಗಳಿಗಾಗಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ (ನರೇಗಾ/MGNREGA)**

"ಕತೆಪುಸ್ತಕ ಆಧಾರಿತವಾದ "ಗುಂಡುತೋಪುಗಳತ್ತ ಹೋದವು?"

**ಉದ್ದೇಶಗಳು:**

- ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ (ನರೇಗಾ/**MGNREGA**) ಬಗ್ಗೆ ತಿಳಿಯುವುದು
- ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು (ನರೇಗಾ/**MGNREGA**) ಹೇಗೆ ಈ ಸಂಪನ್ಮೂಲಗಳನ್ನು ರಕ್ಷಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು

**ನರೇಗಾ ಎಂದರೇನು?**

'ಎಂ ಜಿ ಎನ್ ಆರ್ ಈ ಜಿ ಎ' ಅಥವಾ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು ಭಾರತೀಯ ಕಾರ್ಮಿಕ ಶಾಸನ/ಕಾನೂನನ್ನು ಜಾರಿಗೊಳಿಸಿತು. ಇದು ಭಾರತದಾದ್ಯಂತ ಹಳ್ಳಿಗಳಲ್ಲಿ ವಾಸಿಸುವ ಜನರಿಗೆ "ಕೆಲಸ ಮಾಡುವ ಹಕ್ಕು" ಇದನ್ನು ಖಾತರಿಪಡಿಸಿದೆ. ಹಳ್ಳಿಯಲ್ಲಿರುವ ಎಲ್ಲಾ ವಯಸ್ಕರಿಗೆ ಪ್ರತಿವರ್ಷ ನೂರು ದಿನಗಳ ಉದ್ಯೋಗಕ್ಕಾಗಿ 'ಎಂ ಜಿ ಎನ್ ಆರ್ ಈ ಜಿ ಎ' ಕಾನೂನುಬದ್ಧ ಕೆಲಸದ ಭರವಸೆಯನ್ನು ನೀಡಲಾಗುತ್ತದೆ. ಈ ಶಾಸನಬದ್ಧ ಕನಿಷ್ಠ ವೇತನದಲ್ಲಿ ಸಾರ್ವಜನಿಕ ಕೆಲಸಕ್ಕೆ ಸಂಬಂಧಿಸಿದಂತೆ ಆ ವಯಸ್ಕರು ಸ್ವಯಂ ಪ್ರೇರಿತವಾಗಿ ಕೌಶಲ್ಯರಲ್ಲದ/ಅಕುಶಲ ದೈಹಿಕ ಕೆಲಸ ಮಾಡಲು ಸಿದ್ಧರಿರುತ್ತಾರೆ.

'ಎಂ ಜಿ ಎನ್ ಆರ್ ಈ ಜಿ ಎ' ನ ಉದ್ದೇಶವೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಭದ್ರತೆಯನ್ನು ಸುಧಾರಿಸುವುದಾಗಿದೆ. ಅಕುಶಲ ಕಾರ್ಮಿಕ ವ್ಯಕ್ತಿಗೆ 15 ದಿನಗಳೊಳಗಾಗಿ ಉದ್ಯೋಗ ನೀಡದಿದ್ದಲ್ಲಿ ಅವರು ನಿರುದ್ಯೋಗ ಭತ್ಯೆಗೆ ಅರ್ಹರಾಗಿರುತ್ತಾರೆ.

**ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು (ನರೇಗಾ/**MGNREGA**) ಜನಸಮುದಾಯ ಮುಕ್ತವಾಗಿ ಬಳಸಬಹುದಾದ ಸಂಪನ್ಮೂಲಗಳನ್ನು ರಕ್ಷಿಸಲು ಸಹಕಾರಿಯಾಗಿದೆ. ಏಕೆಂದರೆ.......**

ನರೇಗಾ ಸಹಕಾರದ ಮೂಲಕ ಇಂತಹ ಸಂಪನ್ಮೂಲಗಳನ್ನು ರಕ್ಷಿಸಲು ಸಾಧ್ಯವಾಗಿದೆ. ಹಳ್ಳಿಗಳಿಗರಿಗೆ ಮುಖ್ಯವಾಗಿ ಮೂಲಭೂತ ಸೌಕರ್ಯವಾಗಿರುವ "ಕೆಲಸ ಮಾಡುವ ಹಕ್ಕು" ಮತ್ತು "ಸಂಪನ್ಮೂಲಗಳ ಹಕ್ಕು" ಈ ಎರಡನ್ನೂ ನರೇಗಾದ ಮೂಲಕ ಚಾಲನೆ ರೂಪಿಸಬಹುದಾಗಿದೆ.

ನರೇಗಾವು ಕಾರ್ಮಿಕರನ್ನು ಒದಗಿಸುವುದರ ಜೊತೆಗೆ ಸಂಪನ್ಮೂಲಗಳನ್ನು ಸಂರಕ್ಷಿಸಲು ಬೇಕಾಗಿರುವಂತಹ ಅನುದಾನದ ಸೌಕರ್ಯವನ್ನು ಸಹ ಒದಗಿಸುತ್ತದೆ. ಈ ನರೇಗ ಯೋಜನೆಯ ಅಡಿಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳೆಂದರೆ ನೀರಿನ ಕೊಯ್ಲು, ಜಲಸಂರಕ್ಷಣೆ, ಕೆರೆಗಳ ಹೂಳೆತ್ತುವಿಕೆ, ಬಾವಿಗಳ ನಿರ್ಮಾಣ, ಕಾಡುಗಳ

ಸಂರಕ್ಷಣೆ, ನರ್ಸರಿಗಳನ್ನು ಬೆಳೆಸುವುದು, ದನಕರುಗಳಿಗಾಗಿ ಶೆಡ್ ಗಳನ್ನು ನಿರ್ಮಿಸುವುದು, ಅರಣ್ಯೀಕರಣ ಮತ್ತು ಇತ್ಯಾದಿ ಕೆಲಸಗಳನ್ನು ನರೇಗಾ ಮೂಲಕ ನಿರ್ವಹಿಸಲಾಗುತ್ತದೆ. ನರೇಗಾವು ಕೇವಲ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಸುಧಾರಿಸುವ ಸಲುವಾಗಿ ಕಾರ್ಮಿಕರನ್ನು ಒದಗಿಸಲು ಸಹಾಯ ಮಾಡುವುದು ಮಾತ್ರವಲ್ಲದೇ, ಜನಸಮುದಾಯ ಮುಕ್ತವಾಗಿ ಬಳಸಬಹುದಾದಂತಹ ಹೇರಳವಾದ ಪ್ರಾಕೃತಿಕ ಸಂಪನ್ಮೂಲಗಳು ಮತ್ತು ಅವುಗಳಿಗೆ ಪ್ರವೇಶಿಸುವ ಅವಕಾಶವನ್ನು ಒದಗಿಸುವ ಮೂಲಕ ಜನರ ಜೀವನದ ಗುಣಮಟ್ಟವನ್ನು ಸುಧಾರಿಸಿದೆ.




**ಮಾಡುವ ಕಾರ್ಯಚಟುವಟಿಕೆಗಳು**

**ಚಟುವಟಿಕೆ 1: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು (ನರೇಗಾ/MGNREGA) ಹೇಗೆ ಈ ಸಂಪನ್ಮೂಲಗಳನ್ನು ರಕ್ಷಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು.**

ನಿಮ್ಮ ಹಳ್ಳಿಯಲ್ಲಿರುವ ಗ್ರಾಮಪಂಚಾಯಿತಿ ಕಚೇರಿಗೆ ಭೇಟಿ ನೀಡಿ, ನರೇಗಾ ಯೋಜನೆಯು ಮಾಡುವಂತಹ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತಷ್ಟು ವಿವರಗಳನ್ನು ತಿಳಿದುಕೊಳ್ಳಬಹುದು.

ವಿದ್ಯಾರ್ಥಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಪಂಚಾಯಿತಿ ಸದಸ್ಯರಿಗೆ ಕೇಳಬಹುದು:

1. ನಿಮ್ಮ ಹಳ್ಳಿಯಲ್ಲಿ ನರೇಗಾ ಯೋಜನೆ ಜಾರಿಯಲ್ಲಿದೆಯೇ?
2. ನಿಮ್ಮ ಹಳ್ಳಿಯಲ್ಲಿ ಒಟ್ಟಾರೆ ಎಷ್ಟು ಮನೆಗಳಿವೆ? ಮತ್ತು ಎಷ್ಟು ಮನೆಗಳು ಈ ನರೇಗಾ ಯೋಜನೆಯ ಕಾರ್ಡ್ಗಳನ್ನು ಹೊಂದಿದ್ದಾರೆ?
3. ನಿಮ್ಮ ಹಳ್ಳಿಯಲ್ಲಿ ಕಳೆದ ಒಂದು ವರ್ಷದಲ್ಲಿ ಈ ನರೇಗಾ ಯೋಜನೆಯ ಅಡಿಯಲ್ಲಿ ಮಾಡಿದಂತಹ ವಿವಿಧ ಕೆಲಸಗಳನ್ನು ಮತ್ತು ಪ್ರತಿ ಕೆಲಸದ ಚಟುವಟಿಕೆಗಳಿಗೆ ಈ ಹಳ್ಳಿಯಿಂದ ಎಷ್ಟು ಜನರನ್ನು ನೇಮಿಸಲಾಗಿದೆ? ಎಂಬುದನ್ನು ಪಟ್ಟಿ ಮಾಡಿ.
4. ನಿಮ್ಮ ಹಳ್ಳಿಯಲ್ಲಿ  ಜನಸಮುದಾಯ ಮುಕ್ತವಾಗಿ ಬಳಸಬಹುದಾದಂತ ವಿವಿಧ ರೀತಿಯ ಸಂಪನ್ಮೂಲಗಳು ಯಾವುವು?
5. ನರೇಗಾ ಯೋಜನೆಯ ಅಡಿಯಲ್ಲಿ ಹಳ್ಳಿಯಲ್ಲಿರುವ ಈ ಸಂಪನ್ಮೂಲಗಳಲ್ಲಿ (ಕೆರೆಗಳು, ಗೋಮಾಳಗಳು, ತೋಪುಗಳು, ಕೊಳಗಳು, ಬಾವಿಗಳು, ಇತ್ಯಾದಿ) ಯಾವ ರೀತಿಯ ಕೆಲಸಗಳನ್ನು ಕೈಗೊಳ್ಳಲಾಗಿದೆ ವಿವರಿಸಿ.
6. ಜನಸಮುದಾಯ ಬಳಸಬಹುದಾದ ಸಂಪನ್ಮೂಲಗಳ ಕುರಿತು ನರೇಗಾ ಯೋಜನೆಯು ಮಾಡಿರುವಂತಹ ಕೆಲಸಗಳಿಂದ ಹಳ್ಳಿಗೆ ಅಥವಾ ಹಳ್ಳಿಯ ಜನರಿಗೆ ಆಗಿರುವ ಪ್ರಯೋಜನಗಳು ಯಾವುವು?



**ಚಟುವಟಿಕೆ2: ತರಗತಿಯನ್ನು ಗುಂಪುಗಳಾಗಿ ವಿಂಗಡಿಸಿ, ಹಳ್ಳಿಯಲ್ಲಿರುವ ಜನಸಮುದಾಯ ಮುಕ್ತವಾಗಿ ಬಳಸಬಹುದಾದಂತ ಸಂಪನ್ಮೂಲಗಳನ್ನು ನಕ್ಷೆ ಮಾಡಿ.**

ಚಟುವಟಿಕೆ 1ರಲ್ಲಿ ಉಲ್ಲೇಖಿಸಿರುವ ಸಂಪನ್ಮೂಲಗಳ ಪಟ್ಟಿಯಿಂದ ಈ ಕೆಳಗಿನವುಗಳನ್ನು ಮಾಡಲು ತಿಳಿಸಿ.

1. ಹಳ್ಳಿಯಲ್ಲಿರುವ ಜನಸಮುದಾಯ ಬಳಸುವ ಸಂಪನ್ಮೂಲಗಳಿಗೆ ಭೇಟಿ ನೀಡಿ ಮತ್ತು ಅದರ ಸುತ್ತಲಿರುವ ಸಂಪನ್ಮೂಲಗಳು ಮತ್ತು ಅವುಗಳ ಚಟುವಟಿಕೆಗಳ ಸ್ಥಿತಿಗತಿಗಳನ್ನು ವಿವರವಾಗಿ ಗಮನಿಸಿ.
2. ಅವರು ಮಾಡಿರುವ ಕ್ಷೇತ್ರ ಭೇಟಿಯಿಂದ ಸಂಪನ್ಮೂಲಗಳನ್ನು ವಿವರಿಸಲು ಅದರ ಬಗ್ಗೆ ಟಿಪ್ಪಣಿ ಬರೆಯಿರಿ. ಈ ಟಿಪ್ಪಣಿಯು ಸಂಪನ್ಮೂಲಗಳ ಸುತ್ತಮುತ್ತಲಿರುವ ಪ್ರದೇಶಗಳು, ಅವುಗಳ ಸ್ಥಿತಿಗತಿಗಳು, ಅವರು ಭೇಟಿ ನೀಡಿದಂತಹ ಸಂದರ್ಭದಲ್ಲಿ ಕಂಡುಬಂದಂತಹ ಯಾವುದೇ ಚಟುವಟಿಕೆಗಳು, ಅವುಗಳಲ್ಲಿನ ಇತರೆ ರಚನೆಗಳು ಅಥವಾ ಮರಗಳು ಮತ್ತು ಇತ್ಯಾದಿ ಗುಣಲಕ್ಷಣಗಳನ್ನು ಒಳಗೊಂಡಿರಬೇಕು.
3. ಇವುಗಳನ್ನು ಸುಧಾರಿಸಲು ಮತ್ತು ವಾರ್ಷಿಕ ನಿರ್ವಹಣೆಗಾಗಿ ಈ ಸಂಪನ್ಮೂಲಗಳ ಸುತ್ತಲೂ ಮಾಡಬಹುದಾದಂತಹ ಕಾರ್ಯಚಟುವಟಿಕೆಗಳು ಯಾವುವು? ಎಂಬುದನ್ನು ಪಟ್ಟಿ ಮಾಡಿ.

**ವಿನೋದ/ಖುಷಿಗಾಗಿ!**

ಗುಂಪುಗಳಲ್ಲಿ ಭೇಟಿ ನೀಡಿದ ವಿದ್ಯಾರ್ಥಿಗಳು, ನೈಸರ್ಗಿಕವಾಗಿ ಸಿಗುವಂತಹ ವಸ್ತುಗಳನ್ನು (ಕಲ್ಲು, ಮಣ್ಣು, ಕಡ್ಡಿಗಳು, ಬೀಜಗಳು ಇತ್ಯಾದಿ.) ಬಳಸಿ ಜನಸಮುದಾಯ ಬಳಸುವಂತಹ ಸಂಪನ್ಮೂಲಗಳ ಚಿಕ್ಕಪ್ರತಿರೂಪದ ಮಾದರಿಗಳನ್ನು ರಚಿಸಲು ಅವರಿಗೆ ಹೇಳಿ.



**ಕಾರ್ಯಹಾಳೆ 3: ನಮ್ಮ ಜೀವನದಲ್ಲಿ ಮರಗಳು ಮತ್ತು ಅವುಗಳ ಹಲವಾರು ಉಪಯೋಗಗಳು**

**"ಕತೆಪುಸ್ತಕ ಆಧಾರಿತವಾದ "ಗುಂಡುತೋಪುಗಳೆತ್ತ ಹೋದವು?"**

**ಉದ್ದೇಶಗಳು:**

- ನಮ್ಮ ಸಂಪನ್ಮೂಲಗಳಲ್ಲಿನ ಮರಗಳ ಉಪಯೋಗದ ಬಗ್ಗೆ ತಿಳಿಯುವುದು
- ನಮ್ಮ ಸಂಪನ್ಮೂಲಗಳಲ್ಲಿನ ಮರಗಳನ್ನು ಮುಖ್ಯವಾಗಿ ಏಕೆ ಸಂರಕ್ಷಿಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವುದು

ಜನಸಮುದಾಯ ಬಳಸಬಹುದಾದ ಸಂಪನ್ಮೂಲಗಳಲ್ಲಿ ಮುಖ್ಯವಾಗಿ ಮರಗಳ ಉಪಯೋಗವೇನು?

ಮಾನವನನ್ನು ಹೊರತು ಪಡಿಸಿ ಬಹು ದೊಡ್ಡಮಟ್ಟದ ಸಂಖ್ಯೆಯ ವಿವಿಧ ಜಾತಿಯ ಪ್ರಾಣಿ-ಪಕ್ಷಿಗಳಿಗೆ ಇದು ಜೀವನಾಧಾರವಾಗಿದೆ ಮತ್ತು ಮರಗಳು ನಮಗೆ ಹಲವಾರು ವಿಧಗಳಲ್ಲಿ ಉಪಯೋಗಕಾರಿಯೂ ಹೌದು. ಒಂದುವೇಳೆ ನೀವು ಮಧ್ಯಾಹ್ನದ ಸಮಯದಲ್ಲಿ ಮರದ ಕೆಳಗೆ ನಿಂತಿದ್ದರೆ, ಆ ಸ್ಥಳದಲ್ಲಿ ಎಷ್ಟು ತಂಪಾಗಿರುತ್ತದೆ ಎಂಬುದನ್ನು ನೀವು ಗಮನಿಸಬಹುದು.  ಮಸುಕಾದ ಭಾಗದಿಂದಲೂ ಸಹ ಅತಿಯಾದ ತೀವ್ರತೆ ಕಡಿಮೆಯಿರುತ್ತದೆ. ಬೇಸಿಗೆಯ ಸುಡುಬಿಸಿಲಿನಿಂದಾಗಿ ನಮ್ಮನ್ನು ರಕ್ಷಿಸಿಕೊಳ್ಳಲು ಬೇಕಾದ ನೆರಳನ್ನು ಈ ಮರಗಳು ನಮಗೆ ಒದಗಿಸುತ್ತದೆ ಮತ್ತು ನಮ್ಮ ಸುತ್ತಮುತ್ತಲಿರುವ ಗಾಳಿಯನ್ನು ತಂಪಾಗಿರಿಸಲು ಸಹಕಾರಿಯಾಗಿವೆ. ವಾಹನಗಳು ಉಗಳುವ ಇಂಗಾಲದ ಅನಿಲ, ಧೂಳು; ಕೈಗಾರಿಕೆಗಳು ಹೊರಹಾಕುವ ವಿಷಾನಿಲ ಹೊಗೆಗಳನ್ನು ಮರಗಳ ಎಲೆಗಳು ಹೀರಿ ಸ್ವಚ್ಛಗೊಳಿಸಿ, ವಾಯುಮಾಲಿನ್ಯವನ್ನು ನಿಯಂತ್ರಿಸಲು ಮರಗಳು ಅತ್ಯಂತ ಮುಖ್ಯವಾಗಿ ಬೇಕಾಗಿವೆ. ಇಲ್ಲದಿದ್ದರೆ ನಮಗೆ ಉಸಿರಾಡಲು ಸಾಧ್ಯವಾಗದಂತಹ ಸ್ಥಿತಿಯನ್ನು ನಾವು ತಲುಪಬೇಕಾಗುತ್ತದೆ. ಗಾಹಿಗಳು ತಮ್ಮ ಮಂದೆಗಳನ್ನು ಮೇಯಿಸಲು, ಮಕ್ಕಳು ಹತ್ತಿ ಆಡಿ-ನಲಿಯಲು, ಇಷ್ಟವಾದ ಹಣ್ಣುಗಳನ್ನು ಕಿತ್ತು ತಿನ್ನಲು ಮತ್ತು ಜನರು ಪೂಜಿಸಲು ಬೇಕಾದ ಹೂವುಗಳನ್ನು ಪಡೆಯಲು ಈ ಮರಗಳು ಅತ್ಯಾವಶ್ಯಕವಾಗಿದೆ. ಇದರ ಜೊತೆಗೆ ಮರಗಳ ಎಲೆಗಳು ಮತ್ತು ಬೀಜಗಳು ಸಹಾ ಹಲವಾರು ರೀತಿಯಲ್ಲಿ ಉಪಯೋಗಕಾರಿಯಾಗಿದೆ. ಉದಾಹರಣೆಗೆ: ಹಲಸಿನಮರದ ಎಲೆಗಳು ಜಾನುವಾರುಗಳ ಮೇವಿಗೆ ಬಳಸಿದರೆ, ಹೊಂಗೆ ಬೀಜಗಳಿಂದ ಎಣ್ಣೆಯನ್ನು ತಯಾರಿಸಬಹುದಾಗಿದೆ. ಮರದ ಕಟ್ಟಿಗೆಗಳನ್ನು ಉರುವಲುಗಳಾಗಿ ಬಳಸಬಹುದು ಮತ್ತು ಇವುಗಳಿಂದ ಪೀಠೋಪಕರಣಗಳು, ಉಪಕರಣಗಳು ಮತ್ತು ಸಂಗೀತ ವಾದ್ಯಗಳನ್ನು ಅಂದರೆ ವೀಣೆಯಂತಹ ವಾದ್ಯವನ್ನು ತಯಾರಿಸಲು ಸಹ ಬಳಸಬಹುದು. ಇನ್ನೂ ಇತರೆ ಅನೇಕ ಮರಗಳ ಭಾಗಗಳು ಖಾಯಿಲೆಗಳನ್ನು ಗುಣಪಡಿಸುವಂತಹ ಔಷಧೀಯ ಗುಣಗಳನ್ನು ಹೊಂದಿವೆ-ಉದಾಹರಣೆಗೆ ಬೇವಿನ ಮರದ ಎಲ್ಲಾ ಭಾಗಗಳು ಔಷಧೀಯ ಗುಣಗಳ ಮೌಲ್ಯಗಳನ್ನು ಹೊಂದಿವೆ. ಮರಗಳಿಂದ ಜನಸಮುದಾಯದ ಹೊರತಾಗಿ ಪ್ರಾಕೃತಿಕವಾಗಿಯೂ ಇತರ ಜೀವಿಗಳಿಗೂ ಹಲವಾರು ಉಪಯೋಗಗಳಿವೆ, ಅಂದರೆ ಹಕ್ಕಿಗಳು, ಕ್ರಿಮಿಕೀಟಗಳು, ಸರೀಸೃಪಗಳು, ಜೇಡ, ಅಳಿಲು, ಜೇನುನೊಣ ಇತರೆ ಅನೇಕ ಜಂತುಗಳಿಗೂ ಸಹಾ ಮರಗಳು ನೆಲೆನೀಡುತ್ತವೆ. ಬೀಸುವ

ಬಿರುಗಾಳಿಯನ್ನು ತಡೆಯಲು ಮರಗಳು ಸಹಕಾರಿಯಾಗಿದೆ, ಜೊತೆಗೆ ಮರಗಳ ಗಟ್ಟಿಯಾದ ಬೇರುಗಳು ಮಣ್ಣಿನ ಒಳಗೆ ಆಳವಾಗಿ ಬೇರೂರಿರುವುದರಿಂದ ಮಣ್ಣಿನ ಸವಕಳಿಯನ್ನು ಸಹಾ ತಡೆಯುತ್ತದೆ.

**ನಾವು ಮರಗಳನ್ನು ಸಂರಕ್ಷಿಸಬೇಕು ಏಕೆಂದರೆ.....**


ಮರಗಳು ನಮಗೆ ಹಲವಾರು ವಿಧದಲ್ಲಿ ಉಪಯೋಗಕಾರಿಯಾಗಿದೆ. ಮರಗಳು ಅತಿಯಾದ ತಾಪಮಾನದಿಂದ ತಂಪಾಗಿಸಲು ಮತ್ತು ವಾಯುಮಾಲಿನ್ಯವನ್ನು ತಡೆಗಟ್ಟಲು ಅತ್ಯಂತ ಸಹಕಾರಿಯಾಗಿದೆ. ಈ ತಡೆಗಟ್ಟುವಿಕೆಯಿಂದಾಗಿ ಹವಾಮಾನದ ಬದಲಾವಣೆ ಮತ್ತು ಭೂಮಂಡಲದ ತಾಪಮಾನದ ಏರಿಕೆಯಿಂದಾಗುವ ದುಷ್ಪರಿಣಾಮವನ್ನು ಕಡಿಮೆ ಮಾಡಲು ಮರಗಳ ಸಂರಕ್ಷಣೆ ಅತ್ಯಂತ ಮುಖ್ಯವಾಗಿದೆ. ವ್ಯವಸಾಯಕ್ಕೆ ಬೇಕಾದಂತಹ ಮಣ್ಣಿನ ಮೇಲ್ಮೈ ಪದರವು ಸವೆದುಹೋಗದಂತೆ ಸಂರಕ್ಷಿಸಿ, ಮಣ್ಣಿನ ಸವಕಳಿಯನ್ನು ತಡೆಗಟ್ಟಲು ಮರಗಳ ಅವಶ್ಯಕತೆ ಇದೆ. ಅನೇಕ ಮರಗಳು ಸಾಂಕ್ಕೃತಿಕ ಮತ್ತು ಧಾರ್ಮಿಕವಾಗಿಯೂ ಪಾವಿತ್ರ್ಯತೆಯನ್ನು ಹೊಂದಿದ್ದು ಇವು ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿವೆ. ಹಳ್ಳಿಯ ಅಥವಾ ನೆರೆಹೊರೆಯ ಇತಿಹಾಸಗಳಿಗೆ ಸಾಕ್ಷಿಯಾಗಿ ಕೆಲವು ಮರಗಳು ಸಹ ಪ್ರಾಮುಖ್ಯತೆಯನ್ನು ಹೊಂದಿವೆ ಏಕೆಂದರೆ ಅವು ಪಾರಂಪರಿಕವಾಗಿ ಬಂದಂತ ಮರಗಳಾಗಿದ್ದು, ವಿಶೇಷವಾಗಿ ಬೃಹತ್ ಮತ್ತು ಅತ್ಯಂತ ಪ್ರಾಚೀನ ಮರಗಳಾಗಿವೆ. ಮರಗಳು ನಮಗೆ ಅತಿ ಹೆಚ್ಚಿನ ಸಂತೋಷವನ್ನು ಕೊಡುತ್ತವೆ - ಮರದ ಎಲೆಗಳ ಹಸಿರು ತಳಿರುಗಳು, ನಾವು ಇಷ್ಟಪಟ್ಟ ಹಣ್ಣುಗಳನ್ನು ಮರಗಳಿಂದ ಕಿತ್ತು ತಿನ್ನಲು, ಮರಗಳ ಸುತ್ತಲೂ ನಾವು ಖುಷಿಯಿಂದ ಆಡಲು, ಇಂತಹ ಆಟಗಳೆಲ್ಲವೂ ನಮ್ಮ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಉತ್ತಮ ಕೊಡುಗೆ ನೀಡುವಲ್ಲಿ ಮರಗಳು ಸಾಕ್ಷಿಯಾಗಿವೆ. ಇಷ್ಟೆಲ್ಲಾ ಉಪಯೋಗವನ್ನು ನಾವು ಮರಗಳಿಂದ ಪಡೆಯಬಹುದಾದರೆ ಯಾಕೆ ನಾವು ಮರಗಳನ್ನು ರಕ್ಷಿಸಬಾರದು?



**ಮಾಡುವ ಕಾರ್ಯಚಟುವಟಿಕೆಗಳು**

**ಚುಟುವಟಿಕೆ 1: ಮರವನ್ನು ವಿವರಿಸಿ**

ಯಾವುದಾದರೊಂದು ಮರವನ್ನು ಆಯ್ಕೆ ಮಾಡಿ ಮತ್ತು ಅದನ್ನು ಗಮನಿಸಿ. ಮರದ ಕೊಂಬೆಗಳು, ಎಲೆಗಳು, ತೊಗಟೆ, ಹೂವುಗಳು, ಹಣ್ಣು ಮತ್ತು ಬೇರುಗಳು ಎಲ್ಲವನ್ನು ನಿಮ್ಮ ಮಾತಿನಲ್ಲಿ ವಿವರಿಸಿ. ಚಿತ್ರವನ್ನು ರಚಿಸುವುದರ ಮೂಲಕವೂ ಸಹ ನೀವು ಅದನ್ನು ವಿವರಿಸಬಹುದು.



**ಚಟುವಟಿಕೆ 2: ಮರಗಳು ಮತ್ತು ಅವುಗಳ ಉಪಯೋಗಗಳನ್ನು ಗುರುತಿಸಿ.**

ಕೆರೆ, ಗುಂಡುತೋಪುಗಳು ಅಥವಾ ಉದ್ಯಾನವನದ ಸುತ್ತಮುತ್ತಲಿನಲ್ಲಿರುವ ಮರಗಳನ್ನು ಗರುತಿಸಿ. ನಿಮ್ಮ ಹಳ್ಳಿ/ನೆರೆಹೊರೆಯಲ್ಲಿರುವ ವಯಸ್ಕರ ಸಹಾಯವನ್ನು ಪಡೆದುಕೊಂಡು ಈ ಕೆಳಗಿನ ಕೋಷ್ಟಕದಲ್ಲಿ ಮಾಹಿತಿಯನ್ನು ಸಂಗ್ರಹಿಸಿ.

| **ಸಂಖ್ಯೆ** | **ಮರದ ಹೆಸರು ಇಂಗ್ಲೀಷ್ ನಲ್ಲಿ** | **ಮರಕ್ಕೆ ಕರೆಯುವ ಸ್ಥಳೀಯ ಹೆಸರು** | **ಮರದ ಯಾವ ಭಾಗಗಳು ತುಂಬಾ ಉಪಯುಕ್ತವಾಗಿದೆ? (ಉದಾ: ತೊಗಟೆ, ಎಲೆಗಳು, ಹಣ್ಣು, ಹೂವು, ಬೇರುಗಳು)** | **ಇದನ್ನು ಯಾವುದಕ್ಕೆ ಬಳಸಲಾಗುತ್ತದೆ? (ಅರ್ಥಿಕ, ಸಾಮಾಜಿಕ, ಧಾರ್ಮಿಕ/ಸಾಂಸ್ಕೃತಿಕವಾಗಿ ಬಳಕೆ)** |
|---|---|---|---|---|
| ಉದಾ:1 | ಮ್ಯಾಂಗೋ | ಮಾವು | ಹಣ್ಣು, ಎಲೆಗಳು, ಕೊಂಬೆಗಳು | ಹಣ್ಣು - ತಿನ್ನಲು (ಕಚ್ಚಾ ಅಥವಾ ಮಾಗಿದ ಹಣ್ಣನ್ನು ತಿನ್ನಬಹುದು) ಉಪ್ಪಿನಕಾಯಿ ಮತ್ತು ಇತರೆ ಆಹಾರವನ್ನು ತಯಾರಿಸಬಹುದು. ಎಲೆಗಳು - ಮನೆಯ ಬಾಗಿಲಿನ ಹೊರಗೆ ಅಲಂಕಾರಕ್ಕಾಗಿ ಬಳಸಬಹುದು ಕೊಂಬೆಗಳು - ಕಟ್ಟುವಿಕೆಗಾಗಿ ಬಳಸಬಹುದು. |
| 1 | | | | |
| 2 | | | | |
| 3 | | | | |

**ಚಟುವಟಿಕೆ 3: ಮರದ ಸುತ್ತಲಿನ ಜೀವಿಗಳ ವೈವಿಧ್ಯತೆಯನ್ನು ಗಮನಿಸಿ**

ನಿಮ್ಮ ಜನಸಮುದಾಯ ಮುಕ್ತವಾಗಿ ಬಳಸಬಹುದಾದ ಮರಗಳನ್ನು ನೋಡಿ. ಇಂತಹ ಮರಗಳೊಂದಿಗೆ ಸಂವಹನ ನಡೆಸುವ ವಿವಿಧ ರೀತಿಯ ಜೀವವೈವಿಧ್ಯಗಳು ಯಾವುವು?

ಹಕ್ಕಿಗಳು, ಕೀಟಗಳು, ಅಥವಾ ಪ್ರಾಣಿಗಳನ್ನು ನೀವು ಗಮನಿಸಬಹುದೇ? ನಿಮ್ಮ ಅವಲೋಕನದ ಪ್ರಕಾರ ಅವುಗಳನ್ನು ಬರೆಯಬಹುದು ಅಥವಾ ಚಿತ್ರಿಸಬಹುದು. ನಿಮಗೆ ಸಹಾಯವಾಗಲು ಈ ಕೆಳಗಿನ ಕೋಷ್ಟಕವನ್ನು ನೀವು ಬಳಸಬಹುದು.

| ಸಂಖ್ಯೆ | ಮರದ ಹೆಸರು | ಜೀವವೈವಿಧ್ಯ | ಸಂವಹನ |
|---|---|---|---|
| ಉದಾ: 1 | ಮಾವು | ಪಕ್ಷಿಗಳು | ಮರಗಳ ಮೇಲೆ ಗೂಡುಗಳನ್ನು ಕಟ್ಟುವುದು |
| ಉದಾ: 2 | ಮಾವು | ಹಸುಗಳು | ನೆರಳಿಗಾಗಿ ಮರದ ಕೆಳಗೆ ವಿಶ್ರಾಂತಿ ಪಡೆಯುವುದು, ತೊಗಟೆಗೆ ತನ್ನ ಶರೀರದ ಭಾಗಗಳನ್ನು ಉಜ್ಜಿಕೊಳ್ಳುವುದು. |
| | | | |
| | | | |
| | | | |
| | | | |

**ವಿನೋದ/ಖುಷಿಗಾಗಿ!**

1. ಜನಸಮುದಾಯ ಬಳಸುವಂತಹ ಒಂದು ದೊಡ್ಡ ಮರದ ಬಳಿ ಹೋಗಿ. ನಿಮ್ಮೊಂದಿಗೆ ಬಿಳಿ ಕಾಗದದ ಹಾಳೆ ಮತ್ತು ಬಣ್ಣದ ಪೆನ್ಸಿಲ್/ಕ್ರಯಾನ್ಸ್ ಗಳನ್ನು ತೆಗೆದುಕೊಳ್ಳಿ. ನಿಮ್ಮ ಬಳಿ ಈ ಬಣ್ಣದ ಪೆನ್ಸಿಲ್ ಇಲ್ಲವಾದಲ್ಲಿ ಸಾಮಾನ್ಯ ಪೆನ್ಸಿಲ್ ನಿಂದಲೂ ಸಹ ನೀವು ಈ ಚಟುವಟಿಕೆಯನ್ನು ಮಾಡಬಹುದು. ನಿಮ್ಮ ಬಳಿ ಇರುವ ಬಿಳಿ ಕಾಗದದ ಹಾಳೆಯನ್ನು ಮರದ ತೊಗಟೆಯ ಮೇಲೆ ಇಟ್ಟು ಅದರ ಮೇಲೆ ಬಣ್ಣದ ಪೆನ್ಸಿಲ್ ಅಥವಾ ಪೆನ್ಸಿಲ್ ನಿಂದ ತಿದ್ದುವ ಮೂಲಕ ಚಿತ್ರಿಸಿ. ಇದರಿಂದ ಕಾಗದದ ಮೇಲೆ ಮರದ ತೊಗಟೆಯ ಮಾದರಿಯ ಪ್ರತಿರೂಪವನ್ನು ನೀವು ಗಮಸಿಸಬಹುದು. ಅಲ್ಲಿಯೇ ಸುತ್ತಮುತ್ತಲಿರುವ 3-4 ಮರಗಳ ಬಳಿ ಹೋಗಿ ಇದೇರೀತಿ ಮಾಡಿ. ನಂತರ ತೊಗಟೆಯ ಮಾದರಿಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು ನೀವು ಗಮನಿಸಬಹುದೇ?
2. ಮರಗಳ ಕೊಂಬೆಗಳಲ್ಲಿ ಬೆಳೆದಿರುವ ಎಲೆಗಳು ಮತ್ತು ಹೂಗಳನ್ನು ಗಮನಿಸಿ. ಅವುಗಳಲ್ಲಿ ಕೆಲವು ನೆಲದ ಮೇಲೆ ಬಿದ್ದಿದೆಯೇ? ಬಿದ್ದಿರುವ ಎಲೆ ಮತ್ತು ಹೂಗಳನ್ನು ಸಂಗ್ರಹಿಸಿ ಅವುಗಳಿಂದ ಹೂಮಾಲೆ ಮತ್ತು ತೋರಣಗಳನ್ನು ಮಾಡಲು ಪ್ರಯತ್ನಿಸಿ. ಇದರಿಂದ ನೀವು ಕಿರೀಟ, ಕೈಕಡಗ/ಬಳೆ, ನೆಕ್ಲೆಸ್ ಮತ್ತು ಇನ್ನಿತರೆ ಆಭರಣಗಳ ಮಾದರಿಗಳನ್ನು ಸಹ ಮಾಡಬಹುದು. ನಿಮ್ಮ ಹಳ್ಳಿಯಲ್ಲಿರುವ ಇತರರು ಹೂವುಗಳಿಂದ ಹೂಮಾಲೆಗಳನ್ನು ತಯಾರಿಸುತ್ತಾರೆಯೇ? ಹೌದು ಎಂದಾದಲ್ಲಿ ಅವರು ಅವುಗಳನ್ನು ಯಾವುದಕ್ಕಾಗಿ ಉಪಯೋಗಿಸುತ್ತಾರೆ?
3. ಆಲದ ಮರದಿಂದ ಒಂದೆರೆಡು ದೊಡ್ಡ ಎಲೆಗಳನ್ನು ತೆಗೆದುಕೊಳ್ಳಿ. ಈ ಎಲೆಗಳನ್ನು ಸುಮಾರು 2 ವಾರಗಳ ಕಾಲ ನೀರಿನ ಒಳಗೆ ಹಾಕಿ ಮುಚ್ಚಿ, ಎಲೆಗಳು ಪೂರ್ಣಪ್ರಮಾಣದಲ್ಲಿ ಮಾತ್ರ ನೆನೆಯುವಸ್ಟು ನೀರಿದ್ದರೆ ಸಾಕು ಎಂಬುದನ್ನು ಖಚಿತಪಡಿಸಿಕೊಳ್ಳಿ, 2 ವಾರಗಳ ನಂತರ ಈ ಎಲೆಗಳ ಹಸಿರು ಭಾಗಗಳು ಸಂಪೂರ್ಣವಾಗಿ ಉದುರಿಹೋಗಿ ಅದರಲ್ಲಿರುವ ಅಭಿದಮನಿಗಳು ಮಾತ್ರ ಉಳಿದಿರುವುದನ್ನು ನೀವು ಗಮನಿಸಬಹುದು. ಈ ಎಲೆಯನ್ನು ಗಟ್ಟಿಯಾಗಿ ಒಣಗುವವರೆಗೂ ಕೆಲವು ನಿಮಿಷಗಳ ಕಾಲ ಬಿಸಿಲಿನಲ್ಲಿ ಇಡಿ. ನಂತರ ನೀವು ಈ ಎಲೆಯಿಂದ-ವರ್ಣರಂಜಿತವಾದ ಜ್ಯಾಮೀತಿಯ ವಿನ್ಯಾಸ ಮಾದರಿಗಳು ಅಥವಾ ಸುರಳಿಯಾಕಾರಾದ/ಜಟಿಲವಾದ ರೇಖಾಚಿತ್ರಗಳನ್ನು ಸಹ ಚಿತ್ರಿಸಬಹುದು.
4. ನಿಮ್ಮ ಹತ್ತಿರದಲ್ಲಿ ಹುಣಸೆ ಮರಗಳಿವೆಯೇ? ಒಂದುವೇಳೆ ಇದ್ದಲ್ಲಿ ಈ ಮರಗಳಲ್ಲಿರುವ ಮಾಗಿದ ಹುಣಸೆಹಣ್ಣುಗಳನ್ನು ಸಂಗ್ರಹಿಸಿ ಮತ್ತು ಅವುಗಳನ್ನು ತಿಂದು ಅದರಲ್ಲಿರುವ ಸಿಹಿ-ಹುಳಿಯ ರುಚಿಯನ್ನು ಆನಂದಿಸಿ! ಆ ಹಣ್ಣುಗಳಲ್ಲಿರುವ ಹುಣಸೆ ಬೀಜಗಳನ್ನು ಸಂಗ್ರಹಿಸಿ, ಅವುಗಳಿಂದ ಅನೇಕ ಆಟಗಳನ್ನು ಆಡಲು ಬಳಸಿ ಅಂದರೆ ಕುಂಟೆಬಿಲ್ಲೆ, ಅಳಗುಳಿ ಮನೆ, ಚೌಕಬಾರ, ಹಾವು ಮತ್ತು ಏಣಿ ಆಟ, ಲುಡೋ, ಇತ್ಯಾದಿ ಆಟಗಳನ್ನು ಸಹ ಆಡಬಹುದು.

